UASB LIBRARY
Newspaper Clippings
Pg .1 Monday 22-03-2021 Jai Kisan




# ಕೃಷಿ ವಿವಿ ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪನೆಗೆ ತ್ರಿಲೋಚನ್ ಶಂಕು

## 'ಸರ್ಕಾರಿ ನೌಕರಿ ಬದಲು ಸ್ವಯಂ ಉದ್ಯೋಗಕ್ಕೆ ಯತ್ನಿಸಿ'



ಬೆಂಗಳೂರು ಕೃಷಿ ವಿವಿಯಲ್ಲಿ ಕೌಶಲ್ಯಾಭಿವೃದ್ಧಿ ಕೇಂದ್ರಕ್ಕೆ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಮಹಾ ನಿರ್ದೇಶಕ(ಕೃಷಿ ಸಂಶೋಧನೆ ಮತ್ತು ಶಿಕ್ಷಣ) ಡಾ। ತ್ರಿಲೋಚನ್ ಮಹಾಪಾತ್ರ ಶಂಕುಸ್ಥಾಪನೆ ನೆರವೇರಿಸಿದರು. ಡಾ। ಎಸ್.ರಾಜೇಂದ್ರ ಪ್ರಸಾದ್ ಇದ್ದರು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೃಷಿ ವಿಜ್ಞಾನದಲ್ಲಿ ಪದವಿ ಪಡೆದವರಿಗೆ ಮಾತ್ರ ಕೃಷಿ ಸ್ನಾತಕೋತ್ತರ ಪದವಿ ಪಡೆಯಲು ಅವಕಾಶ ಕಲ್ಪಿಸಿಕೊಡುವ ಪದ್ಧತಿ ಮುಂದುವರಿಸಬೇಕು ಎಂದು ಭಾರತೀಯ ಕೃಷಿ ಅನುಸಂಧಾನ ಪರಿಷತ್ ಮಹಾ ನಿರ್ದೇಶಕ (ಕೃಷಿ ಸಂಶೋಧನೆ ಮತ್ತು ಶಿಕ್ಷಣ) ಡಾ। ತ್ರಿಲೋಚನ್ ಮಹಾಪಾತ್ರ ತಿಳಿಸಿದ್ದಾರೆ. ಬೆಂಗಳೂರು ಕೃಷಿ ವಿವಿಯಲ್ಲಿ ಶನಿವಾರ ಕೌಶಲ್ಯಾಭಿವೃದ್ಧಿ ಕೇಂದ್ರದ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಜಾರಿ ಮಾಡಿರುವ ನೂತನ ಶಿಕ್ಷಣ ನೀತಿಯಲ್ಲಿ ಸಾಮಾನ್ಯ ಪದವಿ ಪಡೆದವರಿಗೂ ಕೃಷಿ ವಿಜ್ಞಾನದಲ್ಲಿ ಸ್ನಾತಕೋತ್ತರ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಇದರಿಂದ ಕೃಷಿ ಕ್ಷೇತ್ರದಲ್ಲಿ ಸಮಗ್ರ ಸಂಶೋಧನೆಗೆ ಸಾಧ್ಯವಾಗುವುದಿಲ್ಲ ಎಂದು ಅಭಿಪ್ರಾಯಪಟ್ಟರು. ಕೃಷಿ ವಿಜ್ಞಾನ ಪದವಿ ಪಡೆದ ವಿದ್ಯಾರ್ಥಿಗಳು ಸರ್ಕಾರಿ ಉದ್ಯೋಗ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗಿಗಳಾಗಲು ಮುಂದಾಗುವ ಬದಲಿಗೆ ಸ್ವಂ ಉದ್ಯೋಗಗಳನ್ನು ಮಾಡಬೇಕು. ಜೊತೆಗೆ, ಕೃಷಿ ಕ್ಷೇತ್ರದಲ್ಲಿರುವ ರೈತರ ನೆರವಿಗೆ ಶ್ರಮಿಸಬೇಕು ಎಂದರು. ವಿವಿ ಕುಲಪತಿ ಡಾ। ಎಸ್.ರಾಜೇಂದ್ರ ಪ್ರಸಾದ್, ಬೆಂಗಳೂರು ಮತ್ತು ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಶಾಸಕ ಎಂ.ಕೃಷ್ಣಪ್ಪ ಇತರರಿದ್ದರು.

# 'ನೂತನ ತಂತ್ರಜ್ಞಾನಕ್ಕೆ ಆದ್ಯತೆ ನೀಡಿ'

■ **ವಿಕ ಸುದ್ದಿಲೋಕ** ಬೆಂಗಳೂರು

ನೂತನ ತಂತ್ರಜ್ಞಾನಕ್ಕೆ ಆದ್ಯತೆ ನೀಡುವುದರಿಂದ ತೋಟಗಾರಿಕಾ ಕ್ಷೇತ್ರದ ಪ್ರಗತಿ ಸಾಧ್ಯ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆ ಕಾರ್ಯದರ್ಶಿ ಹಾಗೂ ಐಸಿಎಆರ್‌ನ ಮಹಾ ನಿರ್ದೇಶಕ ಡಾ. ತ್ರಿಲೋಚನ ಮಹಾಪಾತ್ರ ಹೇಳಿದರು.



ಕಾರ್ಯಕ್ರಮದಲ್ಲಿ ಸಾಧಕ ರೈತರನ್ನು ಗೌರವಿಸಲಾಯಿತು.

### ಐಐಎಚ್‌ಆರ್‌ನ ಸುವರ್ಣ ಮಹೋತ್ಸವ ಕಟ್ಟಡ ಉದ್ಘಾಟನೆ

ಹೆಸರಘಟ್ಟದ ಐಐಎಚ್‌ಆರ್‌ನ ಸುವರ್ಣ ಮಹೋತ್ಸವ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ(ಐಐಎಚ್‌ಆರ್) ನಿರ್ದೇಶಕ ಡಾ. ಎಂ.ಆರ್.ದಿನೇಶ್ ಮಾತನಾಡಿ, ''ಸಂಸ್ಥೆ ಕಳೆದ 54 ವರ್ಷಗಳಲ್ಲಿ 310 ತಳಿ ಹಾಗೂ ತಂತ್ರಜ್ಞಾನಗಳನ್ನು ಬಿಡುಗಡೆ ಮಾಡಿದೆ. ಇವುಗಳನ್ನು ದೇಶದಾದ್ಯಂತ ಆಳವಡಿಸಿಕೊಂಡಿರುವುದರ ಪರಿಣಾಮ ಪ್ರತಿವರ್ಷ ಸರಾಸರಿ 13 ಸಾವಿರ ಕೋಟಿ ರೂ.ಗೂ ಅಧಿಕ ಆರ್ಥಿಕ ಲಾಭಾಂಶ ಬರುತ್ತಿದೆ,'' ಎಂದು ಹೇಳಿದರು.

ಹೊಸದಿಲ್ಲಿಯ ಐಸಿಎಆರ್ ಉಪ-ಮಹಾನಿರ್ದೇಶಕ(ತೋಟಗಾರಿಕೆ) ಡಾ. ಎ.ಕೆ.ಸಿಂಗ್ ಮಾತನಾಡಿ, ''ತೋಟಗಾರಿಕಾ ಪ್ರಗತಿಗೆ ಐಐಎಚ್‌ಆರ್ ಕೊಡುಗೆ ಅಪಾರ'' ಎಂದರು.

ಇದೇ ಸಂದರ್ಭದಲ್ಲಿ ಆರ್ಕಾ ಸಮಾಚಾರ್ ಅನ್ನು ಬಿಡುಗಡೆಗೊಳಿಸಲಾಯಿತು. ಗುಲಾಬಿ ಬೆಳೆಯ ಸಮಗ್ರ ಮಾಹಿತಿಯ ತಂತ್ರಾಂಶ ಪುಸ್ತಕ ಲೋಕಾರ್ಪಣೆಗೊಳಿಸಲಾಯಿತು. ಐಐಎಚ್‌ಆರ್‌ನ ಪ್ರಧಾನ ವಿಜ್ಞಾನಿಗಳಾದ ಡಾ. ಬಿ.ನಾರಾಯಣಸ್ವಾಮಿ, ಡಾ. ಅಘೋರ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಬೆಂಗಳೂರು ಕೃಷಿ ವಿವಿ ನಿರ್ಮಿಸುತ್ತಿರುವ 'ಕೌಶಲಾಭಿವೃದ್ಧಿ ಕೇಂದ್ರ'ದ ಶಂಕು ಸ್ಥಾಪನೆಯನ್ನು ಹೊಸದಿಲ್ಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ ಮಹಾ ನಿರ್ದೇಶಕ ಡಾ. ತ್ರಿಲೋಚನ್ ಮಹಾಪಾತ್ರ ನೆರವೇರಿಸಿದರು.

22-03-2021 Vk Pg 10

For more information visit
University Library Website
Web - uasbagrilibindia.org
E-mail- librarian@uasbangalore.edu.in

22-03-2021 Kp Pg 02

22-03-2021 Kp Pg 04


# ದಾಖಲೆ ಪ್ರಮಾಣದ ಆಹಾರಧಾನ್ಯ ಉತ್ಪಾದನೆ

## ಪ್ರಸಕ್ತ ಸಾಲಿನಲ್ಲಿ 140 ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯ ಉತ್ಪಾದನೆ | ನಿರೀಕ್ಷಿತ ಗುರಿಗಿಂತಲೂ 7 ಲಕ್ಷ ಮೆಟ್ರಿಕ್ ಟನ್ ಜಾಸ್ತಿ ಇನ್ನು 2 ತಿಂಗಳ ಅವಧಿಯಲ್ಲಿ 145 ಲಕ್ಷ ಮೆಟ್ರಿಕ್ ಟನ್‌ಗೆ ಏರಿಕೆ ಸಾಧ್ಯತೆ | ರಾಜ್ಯ ಕೃಷಿ ಇಲಾಖೆ ಅಧಿಕಾರಿಗಳಿಂದ ಅಂದಾಜು

• **ಸಂಪತ್ ತರೀಕೆರೆ**
**ಕನ್ನಡಪ್ರಭ ವಾರ್ತೆ,** ಬೆಂಗಳೂರು

ರಾಜ್ಯದಲ್ಲಿ ಭಾರೀ ಮಳೆ, ಪ್ರವಾಹದಿಂದ ಸಾವಿರಾರು ಎಕರೆ ಪ್ರದೇಶದಲ್ಲಿ ಬೆಳಕಾನಿಯಂತಹ ಘಟನೆಗಳ ನಡುವೆಯೂ 2020-21ನೇ ಸಾಲಿನಲ್ಲಿ ದಾಖಲೆ ಪ್ರಮಾಣದಲ್ಲಿ ಆಹಾರ ಧಾನ್ಯ ಉತ್ಪಾದನೆಯಾಗಿದೆ.

ಈ ಬಾರಿ 140.66 ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯ ಉತ್ಪಾದನೆಯಾಗಿದ್ದು, ನಿರೀಕ್ಷಿತ ಗುರಿ 133.05 ಲಕ್ಷ ಮೆಟ್ರಿಕ್ ಟನ್‌ಗಿಂತ ಸುಮಾರು 7 ಲಕ್ಷ ಮೆಟ್ರಿಕ್ ಟನ್‌ನಷ್ಟು ಉತ್ಪಾದನೆ ಜಾಸ್ತಿಯಾಗಿದೆ ಎಂದು ರಾಜ್ಯ ಆರ್ಥಿಕ ಮತ್ತು ಅಂಕಿ ಅಂಶಗಳ ನಿರ್ದೇಶನಾಲಯದ ವರದಿ ತಿಳಿಸಿದೆ. ಇನ್ನೂ ಕೂಡ ಬೇಸಿಗೆ ಹಂಗಾಮು ಮುಗಿಯಲು ಎರಡು ತಿಂಗಳು ಬಾಕಿ ಇದ್ದು, ಒಟ್ಟಾರೆ ಉತ್ಪಾದನೆ 145 ಲಕ್ಷ ಮೆಟ್ರಿಕ್ ಟನ್‌ಗೆ ಏರಿಕೆಯಾಗುವ ಸಾಧ್ಯತೆ ಇದೆ ರಾಜ್ಯ ಕೃಷಿ ಇಲಾಖೆ ಅಂದಾಜಿಸಿದೆ.



**ಸಕಾಲದಲ್ಲಿ ಸಮರ್ಪಕವಾಗಿ ಮಳೆ ಬಂದ ಹಿನ್ನೆಲೆ, ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳನ್ನು ಇಲಾಖೆ ವತಿಯಿಂದ ನೀಡಲಾಯಿತು. ಜತೆಗೆ ಹೊಸ ತಳಿಯ ಬಳಕೆಯಿಂದಾಗಿ ಈ ಬಾರಿ ಉತ್ತಮವಾದ ಇಳುವರಿ ಪಡೆಯಲು ಸಾಧ್ಯವಾಯಿತು. ಉತ್ಪಾದನೆಯಲ್ಲೂ ಸಹ ಗಣನೀಯವಾಗಿ ಏರಿಕೆಯಾಗಿದೆ. ಕೋವಿಡ್ ಸಂಕಷ್ಟದಲ್ಲೂ ರಾಜ್ಯ ರೈತರ ಶ್ರಮ ಮೆಚ್ಚುವಂಥದ್ದು.**
• **ಡಾ.ತ್ರಿನಿವಾಸ್,** ನಿರ್ದೇಶಕರು, ಕೃಷಿ ಇಲಾಖೆ

ಕೃಷಿ ಇಲಾಖೆ 2020-21ನೇ ಸಾಲಿನಲ್ಲಿ ಮುಂಗಾರು ಹಂಗಾಮಿನಲ್ಲಿ 73 ಲಕ್ಷ ಹೆಕ್ಟೇರ್, ಹಿಂಗಾರು ಹಂಗಾಮಿನಲ್ಲಿ 32 ಲಕ್ಷ ಹೆಕ್ಟೇರ್ ಮತ್ತು ಬೇಸಿಗೆಯಲ್ಲಿ 5 ಲಕ್ಷ ಹೆಕ್ಟೇರ್ ಒಟ್ಟು 110 ಹೆಕ್ಟೇರ್ ನಲ್ಲಿ 133.05 ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯ ಮತ್ತು 13.05 ಲಕ್ಷ ಟನ್ ಎಣ್ಣೆಕಾಳುಗಳನ್ನು ಉತ್ಪಾದಿಸುವ ಗುರಿ ಹೊಂದಿತ್ತು. ವಿವಿಧ ಕಾರಣಗಳಿಂದ ರಾಜ್ಯದಲ್ಲಿ 110 ಹೆಕ್ಟೇರ್‌ಗಳ ಗುರಿಯಲ್ಲಿ ಕೇವಲ 75.18 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಕೈಗೊಳ್ಳಲಾಗಿತ್ತು. ಮುಂಗಾರಿನಲ್ಲಿ 112.56 ಮೆಟ್ರಿಕ್ ಟನ್, ಹಿಂಗಾರು ಹಂಗಾಮಿನಲ್ಲಿ 16.01 ಮತ್ತು ಬೇಸಿಗೆಯಲ್ಲಿ 12.09 ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯ ಉತ್ಪಾದನೆ ಮಾಡಲಾಗಿದೆ. ಹಾಗೆಯೇ ಪ್ರಸಕ್ತ ಸಾಲಿನಲ್ಲಿ 11.46 ಲಕ್ಷ ಮೆಟ್ರಿಕ್ ಟನ್ ಎಣ್ಣೆಕಾಳುಗಳು ಮತ್ತು ವಾಣಿಜ್ಯ ಬೆಳೆಗಳಾದ ಹತ್ತಿ 19.11 ಲಕ್ಷ ಮೆಟ್ರಿಕ್ ಟನ್, ಕಬ್ಬು 410.40 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಮಾಡಲಾಗಿದೆ ಎಂದು ರಾಜ್ಯ ಆರ್ಥಿಕ ಮತ್ತು ಅಂಕಿ ಅಂಶಗಳ ನಿರ್ದೇಶನಾಲಯ ವರದಿ ಮಾಹಿತಿ ನೀಡಿದೆ.

**ಉತ್ಪಾದನೆ ಹೆಚ್ಚಲಿದೆ:** ಕೃಷಿ ಬೆಳೆಗಳ ಕುರಿತು ರಾಜ್ಯ ಆರ್ಥಿಕ ಮತ್ತು ಅಂಕಿ ಅಂಶಗಳ ನಿರ್ದೇಶನಾಲಯಕ್ಕೆ ಕೇವಲ 2ನೇ ಮುಂಗಡ ಅಂದಾಜು ವರದಿಯಷ್ಟೇ ಸಲ್ಲಿಕೆಯಾಗಿದೆ. ಬೇಸಿಗೆ ಹಂಗಾಮು ಮುಕ್ತಾಯಕ್ಕೆ ಬಾಕಿ ಇದ್ದು, ಇನ್ನೂ ಎರಡು ಹಂತದಲ್ಲಿ ವರದಿ ಸಿದ್ಧಗೊಳ್ಳಬೇಕಿದೆ. ಹೀಗಾಗಿ ಆಹಾರ ಧಾನ್ಯಗಳ ಉತ್ಪಾದನೆ 140ರಿಂದ 145 ಲಕ್ಷ ಮೆಟ್ರಿಕ್ ಟನ್ ತಲುಪುವ ಸಾಧ್ಯತೆ ಇದೆ ಎಂದು ಕೃಷಿ ಇಲಾಖೆ ಮೂಲಗಳು ತಿಳಿಸಿವೆ.

ಕೃಷಿ ಇಲಾಖೆ 2018-19ನೇ ಸಾಲಿನಲ್ಲಿ 135 ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯ ಉತ್ಪಾದನೆ ಗುರಿ ಹೊಂದಿದ್ದರು ಕೇವಲ 110.46 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆಯಾಗಿತ್ತು. 2019-20ರಲ್ಲಿ 138.67 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಗುರಿ ಇದ್ದರೂ 136.41 ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯ ಉತ್ಪಾದನೆಯಾಗಿತ್ತು.

UASB LIBRARY
Newspaper Clippings
Pg .2 Monday 22-03-2021 Jai Kisan




# ಆಲೂಗೆಡ್ಡೆ ಸಗಟು ದರ ಶೇ 50ರಷ್ಟು ಇಳಿಕೆ



ನವದೆಹಲಿ (ಪಿಟಿಐ): ದೇಶದ ಹಲವೆಡೆ ಆಲೂಗೆಡ್ಡೆ ಸಗಟು ದರವು ಶೇಕಡ 50ರಷ್ಟು ಇಳಿಕೆ ಆಗಿದ್ದು ಕೆ.ಜಿ.ಗೆ ₹ 5ರಿಂದ ₹ 6ರ ಆಸುಪಾಸಿಗೆ ಬಂದಿದೆ ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿದೆ.

ಕೃಷಿ ಮಾರುಕಟ್ಟೆ ವಾಹಿನಿಯಲ್ಲಿ ಇರುವ ಮಾಹಿತಿಯ ಪ್ರಕಾರ ಬೆಂಗಳೂರಿನಲ್ಲಿ ಶನಿವಾರ ಪ್ರತಿ ಕೆ.ಜಿ. ದರ ಕನಿಷ್ಠ ₹ 13ರಿಂದ ಗರಿಷ್ಠ ₹ 15ರವರೆಗೆ ಇತ್ತು.

ಗ್ರಾಹಕರಿಗೆ ಅತ್ಯಂತ ಕಡಿಮೆ ಬೆಲೆಗೆ ಆಲೂಗೆಡ್ಡೆ ಸಿಗುತ್ತಿದೆ. ಆದರೆ, ರೈತರಿಗೆ ಉತ್ಪಾದನಾ ವೆಚ್ಚವೂ ಸಿಗದಂತಾಗಿದೆ.

ಆಹಾರ ಸಂಸ್ಕರಣಾ ಸಚಿವಾಲಯದ ದರಪಟ್ಟಿಯ ಪ್ರಕಾರ, ಆಲೂಗೆಡ್ಡೆ ಬೆಳೆಯುವ ಪ್ರಮುಖ 60 ಪ್ರದೇಶಗಳ ಪೈಕಿ ಕರ್ನಾಟಕ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಪಂಜಾಬ್, ಹಿಮಾಚಲ ಪ್ರದೇಶ, ಮಧ್ಯಪ್ರದೇಶ, ಗುಜರಾತ್ ಮತ್ತು ಬಿಹಾರ ರಾಜ್ಯಗಳ 25 ಪ್ರದೇಶಗಳಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷದ ಮಾರ್ಚ್ 20ರಂದು (ಶನಿವಾರ) ಸಗಟು ದರವು ಶೇ 50ರಷ್ಟು ಕಡಿಮೆ ಇದೆ.

ಉತ್ತರ ಪ್ರದೇಶದ ಸಂಭಾಲ ಮತ್ತು ಗುಜರಾತ್‌ನ ದೀಸಾದಲ್ಲಿ ಸಗಟು ದರವು ಶನಿವಾರ ಮೂರು ವರ್ಷಗಳ ಸರಾಸರಿಗಿಂತ ಕಡಿಮೆಯಾಗಿ, ಪ್ರತಿ ಕೆ.ಜಿ.ಗೆ ₹ 6ಕ್ಕೆ ಇಳಿದಿದೆ.

ಪಂಜಾಬ್‌ನ ಅಮೃತಸರ ಹಾಗೂ ದೆಹಲಿಯಲ್ಲಿ ಆಲೂಗೆಡ್ಡೆ ದರವು ಶನಿವಾರ ಕೆ.ಜಿ.ಗೆ ₹ 5ರಷ್ಟಿತ್ತು. ಗರಿಷ್ಠ ದರ ಚೆನ್ನೈನಲ್ಲಿ ಕೆ.ಜಿಗೆ ₹ 17ರಷ್ಟಿತ್ತು.

ಗ್ರಾಹಕ ವ್ಯವಹಾರಗಳ ಸಚಿವಾಲಯದ ಮಾಹಿತಿಯ ಪ್ರಕಾರ, ಸರಾಸರಿ ರಿಟೇಲ್ ದರವು ಶನಿವಾರ ಕೆ.ಜಿಗೆ ₹ 10ರಷ್ಟಿತ್ತು. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕೆ.ಜಿಗೆ ₹ 20ರಷ್ಟಿತ್ತು.

'ಈ ಬಾರಿ ಆಲೂಗೆಡ್ಡೆ ಇಳುವರಿ ಉತ್ತಮವಾಗಿದೆ. ಮಂಡಿಗೆ ಆವಕ ಹೆಚ್ಚಾಗಿದ್ದು, ಗ್ರಾಹಕರು ಪಾವತಿಸಬೇಕಿರುವ ದರ ಕಡಿಮೆ ಮಟ್ಟದಲ್ಲಿದೆ' ಎಂದು ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ಲೀನಾ ನಂದನ್ ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

22-03-2021 Pv Pg 10

22-03-2021 Vv Pg 09

22-03-2021 Vv Pg 11

# ಡ್ರ್ಯಾಗನ್ ಫ್ರೂಟ್ ಕೃಷಿ-ಎಕರೆಗೆ 5 ಲಕ್ಷ ದುಡಿಯೋದು ಹೇಗೆ?

ಸಾಕಷ್ಟು ಕೃಷಿ ಭೂಮಿ ಇದೆ, ಆದರೆ ಹೆಚ್ಚಿಗೆ ನೀರಿಲ್ಲ. ಏನಾದರೊಂದು ಹೊಸ ಬಗೆಯ ವಾಣಿಜ್ಯ ಕೃಷಿ ಮಾಡಬೇಕು ಅಂದ್ರೆ ವಿದೇಶಿ ಬೆಳೆ ಡ್ರ್ಯಾಗನ್ ಫ್ರೂಟ್ ಒಳ್ಳೆಯ ಆಯ್ಕೆ. ಈ ಹಣ್ಣಿನ ಬೆಳೆಯನ್ನು ಯಾವ ರೀತಿಯ ಮಣ್ಣಿನಲ್ಲಾದರೂ ಬೆಳೆಯಬಹುದು. ಜತೆಗೆ ಬೇಸಿಗೆಯಲ್ಲಿ 40 ಡಿಗ್ರಿಯಷ್ಟು ಬಿಸಿಲನ್ನು ಡ್ರ್ಯಾಗನ್ ಫ್ರೂಟ್ ತಡೆದುಕೊಳ್ಳುತ್ತದೆ. ಸಮಶೀತೋಷ್ಣ ವಾತಾವರಣದಲ್ಲೂ ಕೂಡ ಡ್ರ್ಯಾಗನ್ ಫ್ರೂಟ್‌ಅನ್ನು ಚೆನ್ನಾಗಿ ಬೆಳೆಯಬಹುದು. ಇನ್ನು ಇದಕ್ಕೆ ಹೆಚ್ಚು ಆರೈಕೆ ಮಾಡುವ ಅಗತ್ಯವಿಲ್ಲ, ವಾರದಿಂದ 10 ದಿನಕ್ಕೊಮ್ಮೆ ನೀರು ಕೊಟ್ಟರೆ ಸಾಕು. ಮತ್ತೊಂದು ವಿಶೇಷ ಅಂದ್ರೆ ಡ್ರ್ಯಾಗನ್ ಫ್ರೂಟ್ ಕೃಷಿಗೆ ಹಾಕಿದ ಅರಂಭಿಕ ಬಂಡವಾಳವನ್ನು ಎರಡರಿಂದ ಮೂರು ವರ್ಷಗಳಲ್ಲಿ ಹಿಂಪಡೆಯಬಹುದು.

**ಡ್ರ್ಯಾಗನ್ ಫ್ರೂಟ್ ಮಾರುಕಟ್ಟೆ:** ಡ್ರ್ಯಾಗನ್ ಫ್ರೂಟ್ ಒಂದು ವಿದೇಶಿ ಹಣ್ಣು. ವಿಯೆಟ್ನಾಂ ಜಗತ್ತಿನಲ್ಲಿ ಅತಿ ಹೆಚ್ಚು ಡ್ರ್ಯಾಗನ್ ಫ್ರೂಟ್ ಬೆಳೆಯುತ್ತದೆ. ಮಲೇಷ್ಯಾ, ಥೈಲ್ಯಾಂಡ್, ಇಂಡೋನೇಷ್ಯಾ, ತೈವಾನ್, ಶ್ರೀಲಂಕಾ, ಚೀನಾ, ಅಮೆರಿಕ ಮತ್ತು ಇಸ್ರೇಲ್‌ನಲ್ಲಿ ಡ್ರ್ಯಾಗನ್ ಹಣ್ಣಿನ ಕೃಷಿಯನ್ನು ದೊಡ್ಡ ಪ್ರಮಾಣದಲ್ಲಿ ಮಾಡಲಾಗುತ್ತಿದೆ. ಭಾರತ, ನ್ಯೂಜಿಲ್ಯಾಂಡ್, ಆಸ್ಟ್ರೇಲಿಯಾ ಮತ್ತು ಚಿಲಿ ದೇಶಗಳಲ್ಲೂ ಡ್ರ್ಯಾಗನ್ ಫ್ರೂಟ್‌ಗೆ ಬೇಡಿಕೆ ಹೆಚ್ಚಾಗುತ್ತಿದೆ. ಭಾರತದಲ್ಲಿ ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ಆಂಧ್ರಪ್ರದೇಶ, ತಮಿಳುನಾಡು, ತೆಲಂಗಾಣ ಸೇರಿ ಹಲವು ರಾಜ್ಯಗಳಲ್ಲಿ ಡ್ರ್ಯಾಗನ್ ಫ್ರೂಟ್ ಕೃಷಿ ಮುನ್ನೆಲೆಗೆ ಬರುತ್ತಿದೆ. ಹಾಗಾಗಿ ಸ್ಥಳೀಯ ಮಾರುಕಟ್ಟೆಗೆ ಪೂರೈಕೆ ಮಾಡುವ ಜತೆಗೆ ವಿದೇಶಿ ಮಾರುಕಟ್ಟೆಗೆ ಡ್ರ್ಯಾಗನ್ ಫ್ರೂಟ್ ರಫ್ತು ಮಾಡುವ ಅವಕಾಶವೂ ರೈತರಿಗಿದೆ. ಕರ್ನಾಟಕ ಡ್ರ್ಯಾಗನ್ ಫ್ರೂಟ್ ಬೆಳೆಯಲ್ಲಿ ಮುಂಚೂಣಿಯಲ್ಲಿದ್ದು ರಾಜ್ಯದ ನಾನಾ ಭಾಗಗಳಲ್ಲಿ ಈಗಾಗಲೇ ಸುಮಾರು 1 ಸಾವಿರ ಎಕರೆ ಪ್ರದೇಶದಲ್ಲಿ ರೈತರು ಡ್ರ್ಯಾಗನ್ ಫ್ರೂಟ್ ಬೆಳೆದಿದ್ದಾರೆ.

**ಎಂಟರಿಂದ ಒಂಭತ್ತು ತಿಂಗಳಿಗೆ ಫಸಲು:** ಡ್ರ್ಯಾಗನ್ ಹಣ್ಣಿನ ಗಿಡಗಳನ್ನು ನಾಟಿ ಮಾಡಿದ 8ರಿಂದ 9 ತಿಂಗಳಿಗೆ ಸಣ್ಣ ಮಟ್ಟದಲ್ಲಿ ಫಸಲು ಆರಂಭವಾಗುತ್ತದೆ. ಪ್ರತಿ ಹಣ್ಣು 250 ಗ್ರಾಂ ನಿಂದ 600 ಗ್ರಾಂಗಳವರೆಗೂ ತೂಗುತ್ತದೆ. ಎರಡುಮೂರು ಹಣ್ಣುಗಳು ಸೇರಿದರೆ ಒಂದು ಕೆ.ಜಿ. ತೂಕ ಬರುತ್ತದೆ. ಗಿಡಗಳನ್ನು ನಾಟಿ ಮಾಡಿದ ಮೂರು ವರ್ಷಗಳ ನಂತರ ಪ್ರತಿ ಎಕರೆಗೆ 5 ರಿಂದ 6 ಟನ್ ಇಳುವರಿ ನಿರೀಕ್ಷಿಸಬಹುದಾಗಿದೆ. ಈ ಹಣ್ಣಿಗೆ ಹೆಚ್ಚಿನ ಬೆಳಕು ಆಗತ್ಯವಿರುವುದರಿಂದ ಇದನ್ನು ಏಕ ಬೆಳೆಯಾಗಿ ಬೆಳೆಯಬೇಕು.

**ಡ್ರ್ಯಾಗನ್ ಫ್ರೂಟ್ ಕೃಷಿಗೆ ಬಂಡವಾಳ:** ಡ್ರ್ಯಾಗನ್ ಫ್ರೂಟ್ ಕೃಷಿಗೆ ಆರಂಭದಲ್ಲಿ ರೂ. 3 ಲಕ್ಷದಿಂದ ರೂ. 5 ಲಕ್ಷದವರೆಗೆ ಬಂಡವಾಳ ಹಾಕಬೇಕಾಗುತ್ತದೆ. ಆರಂಭದಲ್ಲಿ ಕಲ್ಲು ಆಥವಾ ಸಿಮೆಂಟಿನ ಕಂಬಗಳು, ಹನಿ ನೀರಾವರಿ ಪದ್ಧತಿ, ಸಸಿ, ಗೊಬ್ಬರ ಮತ್ತು ಭೂಮಿ ಹದ ಮಾಡಲು ಹೆಚ್ಚಿನ ಖರ್ಚು ಬರುತ್ತದೆ. ಆರಂಭಿಕ ಖರ್ಚು ಹೆಚ್ಚಿಗೆ ಇದ್ದರೂ ಇದು ನಿರಂತರವಾಗಿ 30 ವರ್ಷ ಫಲ ಕೊಡುತ್ತದೆ. ಮಾರುಕಟ್ಟೆಯಲ್ಲೂ ಬೇಡಿಕೆ ಇರುವುದರಿಂದ ಡ್ರ್ಯಾಗನ್ ಫ್ರೂಟ್ ಕೃಷಿ ಒಂದು ಒಳ್ಳೆಯ ಆಯ್ಕೆ.

**ಡ್ರ್ಯಾಗನ್ ಫ್ರೂಟ್ ಬೆಲೆ:** ಸದ್ಯ ಮಾರುಕಟ್ಟೆಯಲ್ಲಿ ಡ್ರ್ಯಾಗನ್ ಫ್ರೂಟ್‌ನ ವೆರೈಟಿ ಮತ್ತು ಗುಣಮಟ್ಟ ಆಧರಿಸಿ ರೈತರಿಗೆ ಕೆ.ಜಿ. ಡ್ರ್ಯಾಗನ್ ಫ್ರೂಟ್‌ಗೆ ರೂ. 150ರಿಂದ ರೂ. 200ರವರೆಗೆ ಸಿಗುತ್ತಿದೆ. ರಿಟೇಲ್ ಮಾರುಕಟ್ಟೆಯಲ್ಲಿ ಒಂದು ಕೆಜಿ ಡ್ರ್ಯಾಗನ್ ಫ್ರೂಟ್ ಬೆಲೆ ರೂ. 250ರಿಂದ ರೂ. 450ರವರೆಗೆ ಇದೆ. ಋತುಮಾನ ಮತ್ತು ಗುಣಮಟ್ಟದ ಆಧಾರದಲ್ಲಿ ಬೆಲೆಯಲ್ಲಿ ಸ್ವಲ್ಪ ಏರಿಳಿತವಾಗುತ್ತದೆ. ಆದರೆ ಸದಾಕಾಲ ಡ್ರ್ಯಾಗನ್ ಫ್ರೂಟ್‌ಗೆ ಬೇಡಿಕೆ ಇದ್ದೇ ಇದೆ.

**ಡ್ರ್ಯಾಗನ್ ಫ್ರೂಟ್ ಬೆಳೆಸುವುದು ಹೇಗೆ?:** ಒಂದು ಎಕರೆ ಜಮೀನಿನಲ್ಲಿ ಅಂದಾಜು 1700ರಿಂದ 2100 ಡ್ರ್ಯಾಗನ್ ಫ್ರೂಟ್ ಸಸಿಗಳನ್ನು, ಸಾಲಿನಿಂದ ಸಾಲಿಗೆ 12 ಅಡಿ, ಸಸಿಯಿಂದ ಸಸಿಗೆ 8 ಅಡಿ ಅಂತರದಲ್ಲಿ ನಾಟಿ ಮಾಡಬಹುದು. ಕಲ್ಲು ಆಥವಾ ಸಿಮೆಂಟ್ ಕಂಬಗಳ ಜತೆಗೆ ಹನಿ ನೀರಾವರಿ ಪದ್ಧತಿ ಆಳವಡಿಸಿಕೊಂಡರೆ ಉತ್ತಮ. ಈ ಬೆಳೆಗೆ ಮಳೆ ನೀರು ಮತ್ತು ಬೆಳೆಗೆ ಬಿಟ್ಟ ನೀರು ನಿಲ್ಲದಂತೆ ಸಾಲಿನಿಂದ ಸಾಲಿಗೆ 4 ಅಡಿ ಎತ್ತರದ ಬದು ಮಾಡಿ, ಆ ಬದುವಿನ ಮೇಲೆ ಸಸಿಗಳನ್ನು ನಾಟಿ ಮಾಡಬೇಕು. ಸಸಿ ನೆಟ್ಟ 8 ತಿಂಗಳಿಗೆ ಹೂವು ಬಿಡುತ್ತದೆ. ಮೇನಿಂದ ಸೆಪ್ಟೆಂಬರ್‌ವರೆಗೂ ಹೂವು ಬಿಡುವ ಸಮಯ. ಹೂವು ಕಾಣಿಸಿಕೊಂಡ 40 ದಿನಗಳಲ್ಲಿ ಹಣ್ಣು ಕಟಾವು ಮಾಡಬಹುದು.

**ಆರೋಗ್ಯಕ್ಕೆ ಒಳ್ಳೆಯದು ಡ್ರ್ಯಾಗನ್ ಫ್ರೂಟ್:** ಡ್ರ್ಯಾಗನ್ ಫ್ರೂಟ್‌ನಲ್ಲಿ ಆರೋಗ್ಯ ವೃದ್ಧಿಸುವ ಅನೇಕ ಒಳ್ಳೆಯ ಅಂಶಗಳಿವೆ. ಮೀನಿನಲ್ಲಿ ಇರುವ ಒಮೆಗಾ-3, ಒಮೆಗಾ-6 ಅಂಶ ಕೂಡ ಇದರಲ್ಲಿದೆ. ವಿಟಮಿನ್ ಸಿ ಅಂಶ, ಪ್ರೋಟೀನ್ಸ್, ಕಾರ್ಬೋಹೈಡ್ರೇಟ್ಸ್ ಮತ್ತು ನಾರಿನ ಅಂಶ ಹೆಚ್ಚಿಗೆ ಇದೆ. ಮಧುಮೇಹ, ಅಧಿಕ ರಕ್ತದೊತ್ತಡ ಮತ್ತು ಬೊಜ್ಜನ್ನು ಇದರಿಂದ ನಿಯಂತ್ರಿಸಬಹುದು. ರಕ್ತಹೀನತೆಯಿಂದ ಬಳಲುತ್ತಿರುವವರಿಗೆ ಇದು ಒಳ್ಳೆಯ ಆಹಾರ.

### ಫೈನಾನ್ಷಿಯಲ್ ಫ್ರೀಡಂ ಆಪ್‌ನಲ್ಲಿ ಡ್ರ್ಯಾಗನ್ ಫ್ರೂಟ್ ಕೃಷಿ ಕೋರ್ಸ್

ಇಂಡಿಯನ್ ಮನಿ ಡಾಟ್ ಕಾಂ ಫೈನಾನ್ಷಿಯಲ್ ಫ್ರೀಡಂ ಆಪ್‌ನಲ್ಲಿ ಡ್ರ್ಯಾಗನ್ ಫ್ರೂಟ್ ಕೃಷಿಯ ಬಗ್ಗೆ ವಿವರವಾದ ಕೋರ್ಸ್ ವಿನ್ಯಾಸಗೊಳಿಸಲಾಗಿದೆ. ಡ್ರ್ಯಾಗನ್ ಫ್ರೂಟ್ ಕೃಷಿ ಮಾಡಿ ಯಶಸ್ಸು ಕಂಡಿರುವ ರೈತರು ಈ ಕೋರ್ಸ್‌ನಲ್ಲಿ ಮಾರ್ಗದರ್ಶನ ಮಾಡಿದ್ದಾರೆ. ಹಾಗಾದ್ರೆ ಇನ್ನೇಕೆ ತಡ ಈಗಲೇ ಫೈನಾನ್ಷಿಯಲ್ ಫ್ರೀಡಂ ಆಪ್ ಡೌನ್‌ಲೋಡ್ ಮಾಡಿ ಡ್ರ್ಯಾಗನ್ ಫ್ರೂಟ್ ಕೃಷಿ ಶುರು ಮಾಡಿ ಕೈ ತುಂಬಾ ಗಳಿಸಿ.

### ವಿಜಯವಾಣಿ ಓದುಗರಿಗೆ 2,000 ರೂ. ಸ್ಕಾಲರ್‌ಶಿಪ್

ಫೈನಾನ್ಷಿಯಲ್ ಫ್ರೀಡಂ ಆ್ಯಪ್ ಡೌನ್‌ಲೋಡ್ ಮಾಡಿ. VIJAYAVANI ಎಂದು ರೆಫರಲ್ ಕೋಡ್ ಬಳಸಿ, 2,000 ರೂ. ಸ್ಕಾಲರ್‌ಶಿಪ್ ಪಡೆಯಿರಿ.




ಸಿಇಒ, ಸಂಸ್ಥಾಪಕರು ಇಂಡಿಯನ್‌ಮನಿ.ಕಾಂ
ವೆಬ್‌ಸೈಟ್: www.indianmoney.com

## ಕೋರ್ಸ್‌ನಲ್ಲಿ ಏನಿದೆ?

1. ಕೋರ್ಸ್ ಪರಿಚಯ 2. ಮಾರ್ಗದರ್ಶಕರ ಪರಿಚಯ 3. ಏನಿದು ಡ್ರ್ಯಾಗನ್ ಫ್ರೂಟ್ ಕೃಷಿ? 4. ಡ್ರ್ಯಾಗನ್ ಫ್ರೂಟ್‌ನ ಆರೋಗ್ಯ ಪ್ರಯೋಜನಗಳು 5. ಡ್ರ್ಯಾಗನ್ ಫ್ರೂಟ್ ಕೃಷಿ- ಮೂಲಭೂತ ಸೌಕರ್ಯ 6. ಡ್ರ್ಯಾಗನ್ ಫ್ರೂಟ್ ಕೃಷಿ - ಭೂಮಿ ಸಿದ್ಧತೆ ಹೇಗೆ? 7. ಡ್ರ್ಯಾಗನ್ ಫ್ರೂಟ್ ಕೃಷಿ - ಸಸಿಗಳ ಆಯ್ಕೆ 8. ಡ್ರ್ಯಾಗನ್ ಫ್ರೂಟ್ ಕೃಷಿ - ಬಂಡವಾಳ ಮತ್ತು ಖರ್ಚು 9. ಡ್ರ್ಯಾಗನ್ ಫ್ರೂಟ್ ಕೃಷಿ - ಕಟಾವು ಮತ್ತು ಸಂಗ್ರಹ 10. ಡ್ರ್ಯಾಗನ್ ಫ್ರೂಟ್ ಕೃಷಿ - ಕೀಟಬಾಧೆ ಮತ್ತು ನಿಯಂತ್ರಣ 11. ಡ್ರ್ಯಾಗನ್ ಫ್ರೂಟ್ ಕೃಷಿ - ಲಾಭ, ಸವಾಲು, ಮಾನವ ಸಂಪನ್ಮೂಲ 12. ಡ್ರ್ಯಾಗನ್ ಫ್ರೂಟ್ ಕೃಷಿ - ಮಾರುಕಟ್ಟೆ ಮತ್ತು ರಫ್ತು 13. ಆಸಕ್ತ ಕೃಷಿಕರಿಗೆ ನಿಮ್ಮಸಲಹೆ

# ಒಂದು ಜಿಲ್ಲೆ ಒಂದು ಉತ್ಪನ್ನ

ಸ್ವಾವಲಂಬಿ ಭಾರತ ಅಭಿಯಾನಕ್ಕೆ ಪೂರಕವಾಗಿರುವ 'ಒಂದು ಜಿಲ್ಲೆ ಒಂದು ಉತ್ಪನ್ನ' ಎಂಬ ನೀತಿಗೆ ಉತ್ತೇಜನ ನೀಡುವ ಕೆಲಸ ಬಹುತೇಕ ರಾಜ್ಯಗಳಲ್ಲಿ ಶುರುವಾಗಿದೆ. ಕೇಂದ್ರ ಸರ್ಕಾರ ಈಗಾಗಲೇ ಒಂದು ಜಿಲ್ಲೆ ಒಂದು ಉತ್ಪನ್ನವನ್ನು ಗುರುತಿಸಿ ಅಂತಿಮ ಪಟ್ಟಿಯನ್ನು ಇದಕ್ಕಾಗಿ ಮೀಸಲಿರುವ ವೆಬ್‌ಸೈಟ್(https://odop.mofpi.gov.in/odop/)ದಲ್ಲಿ ಪ್ರಕಟಿಸಿದೆ. ದೇಶದ 728 ಜಿಲ್ಲೆಗಳ ಉತ್ಪನ್ನಗಳ ಪಟ್ಟಿಯಲ್ಲಿ ಕೃಷಿ, ತೋಟಗಾರಿಕೆ, ಪಶು ಸಂಗೋಪನೆ, ಹೈನುಗಾರಿಕೆ, ಮೀನುಗಾರಿಕೆ, ಕೋಳಿ ಸಾಕಣೆ ಮುಂತಾದ ಕ್ಷೇತ್ರಗಳ ಉತ್ಪನ್ನಗಳೇ ಹೆಚ್ಚಾಗಿವೆ. ಈ ಪೈಕಿ 226 ಜಿಲ್ಲೆಗಳಲ್ಲಿ ಹಣ್ಣು, 107 ಜಿಲ್ಲೆಗಳಲ್ಲಿ ತರಕಾರಿ, 105 ಜಿಲ್ಲೆಗಳಲ್ಲಿ ಸಾಂಬಾರ ಪದಾರ್ಥಗಳನ್ನು ಗುರುತಿಸಲಾಗಿದೆ. ಇವೇ ಆ ಪಟ್ಟಿಯಲ್ಲಿ ಟಾಪ್ ಮೂರು ಸ್ಥಾನಗಳಲ್ಲಿವೆ. ಮುಖ್ಯ ಬೆಳೆ ಭತ್ತವನ್ನು 40 ಜಿಲ್ಲೆಗಳ ಉತ್ಪನ್ನವಾಗಿ ಗುರುತಿಸಿದರೆ, ಐದು ಜಿಲ್ಲೆಗಳಲ್ಲಿ ಗೋಧಿಯೇ ಮುಖ್ಯ ಉತ್ಪನ್ನ.

ಕೃಷಿ ಮತ್ತು ಕೃಷಿಕರ ಕಲ್ಯಾಣ ಸಚಿವಾಲಯವು ಆಹಾರ ಸಂಸ್ಕರಣಾ ಉದ್ಯಮ ಸಚಿವಾಲಯದ ಜತೆಗೆ ಸಮಾಲೋಚನೆ ನಡೆಸಿ 'ಒಂದು ಜಿಲ್ಲೆ ಒಂದು ಉತ್ಪನ್ನ'ದ ಪಟ್ಟಿಯನ್ನು ಅಂತಿಮಗೊಳಿಸಿದೆ. ಇದಕ್ಕೂ ಮುನ್ನ ಆಯಾ ರಾಜ್ಯ/ಕೇಂದ್ರಾಡಳಿತ ಪ್ರದೇಶ ಮತ್ತು ಇಂಡಿಯನ್ ಕೌನ್ಸಿಲ್ ಆಫ್ ಆಗ್ರಿಕಲ್ಚರ್ ರಿಸರ್ಚ್‌ನಿಂದ (ಐಸಿಎಆರ್) ಮಾಹಿತಿಯನ್ನು ಸಚಿವಾಲಯ ಪಡೆದಿದೆ.

ಆತ್ಮನಿರ್ಭರ ಭಾರತ ಅಥವಾ ಸ್ವಾವಲಂಬಿ ಭಾರತ ಅಭಿಯಾನದ ದೂರದೃಷ್ಟಿಯನ್ನು ಅರ್ಥ ಮಾಡಿಕೊಂಡು ಕಾರ್ಯತತ್ಪರರಾದರೆ ಸ್ಥಳೀಯ ಆರ್ಥಿಕತೆಯೊಂದಿಗೆ ದೇಶದ ಅರ್ಥವ್ಯವಸ್ಥೆಯೂ ಬಲಿಷ್ಠವಾಗಲಿದೆ. ಇದಕ್ಕೆ ಪೂರಕವಾಗಿ ದೇಶಾದ್ಯಂತ ವೋಕಲ್ ಫಾರ್ ಲೋಕಲ್ ಅಭಿಯಾನ, ಒಂದು ಜಿಲ್ಲೆ ಒಂದು ಉತ್ಪನ್ನದ ಗುರುತಿಸುವಿಕೆಯ ಕೆಲಸ ಶುರುವಾಗಿದೆ.

ಉಮೇಶ್‌ಕುಮಾರ್ ಶಿವ್ಮಡ್ಡ

## ಕ್ಲಸ್ಟರ್ ವಿಧಾನದಲ್ಲಿ ಲಭ್ಯ ಯೋಜನೆಗಳು

ವಿವಿಧ ಯೋಜನೆಗಳನ್ನು ಕ್ಲಸ್ಟರ್ ವಿಧಾನದ ಮೂಲಕ ಉತ್ತೇಜಿಸುವುದು ಒಂದು ಜಿಲ್ಲೆ ಒಂದು ಉತ್ಪನ್ನ ಆಥವಾ ಒಂದು ಜಿಲ್ಲೆ ಒಂದು ಮುಖ್ಯ ಉತ್ಪನ್ನ ಯೋಜನೆಯ ಉದ್ದೇಶ. ಇದರಲ್ಲಿ ಲಭ್ಯ ಯೋಜನೆಗಳ ವಿವರ ಇಂತಿದೆ - ಮಿಷನ್ ಫಾರ್ ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಆಫ್ ಹಾರ್ಟಿಕಲ್ಚರ್ (ಎಂಐಡಿಎಚ್), ರಾಷ್ಟ್ರೀಯ ಆಹಾರ ಸುರಕ್ಷತಾ ಯೋಜನೆ (ಎನ್‌ಎಫ್‌ಎಸ್‌ಎಂ), ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆ (ಆರ್‌ಕೆವಿವೈ), ಪರಂಪರಾಗತ ಕೃಷಿ ವಿಕಾಸ ಯೋಜನೆ (ಪಿಕೆವಿವೈ).

## ಯೋಜನಾ ವೆಚ್ಚದ ಹಂಚಿಕೆ

ಕೇಂದ್ರ ಸರ್ಕಾರ 60% ಮತ್ತು ರಾಜ್ಯ ಸರ್ಕಾರ 40%. ಮುಂದಿನ ಐದು ವರ್ಷಗಳ ಅವಧಿಯಲ್ಲಿ ಅಂದರೆ 2020-21 ರಿಂದ 2024-25ರ ಅವಧಿಯಲ್ಲಿ ರಾಜ್ಯಗಳು 500 ಕೋಟಿ ರೂ.ಗಳನ್ನು ಇದಕ್ಕಾಗಿ ಮೀಸಲಿಡಬೇಕು. ಕರ್ನಾಟಕದಲ್ಲಿ ಇದಕ್ಕಾಗಿ ಈ ವರ್ಷದ ಬಜೆಟ್‌ನಲ್ಲಿ 100 ಕೋಟಿ ರೂ. ಮೀಸಲಿಡಲಾಗಿದೆ.



## ಆಹಾರ ಸಂಸ್ಕರಣಾ ಉದ್ಯಮ

ದೇಶದಲ್ಲಿರುವ ಆಹಾರ ಸಂಸ್ಕರಣಾ ಉದ್ಯಮ ಕ್ಷೇತ್ರ ಅಸಂಘಟಿತ ಕ್ಷೇತ್ರವಾಗಿದ್ದು, ಇಲ್ಲಿ ಶೇಕಡ 74 (ಮೂರನೇ ಒಂದು ಭಾಗ ಮಹಿಳೆಯರಿಗೆ) ಉದ್ಯೋಗ ಸೃಜನೆಯಾಗುತ್ತದೆ. ಶೇಕಡ 66 ಉದ್ಯಮ ಗ್ರಾಮೀಣ ಭಾಗದಲ್ಲಿವೆ. ಶೇಕಡ 80 ಕುಟುಂಬ ಕೇಂದ್ರಿತವಾಗಿರುವ ಕಿರು ಉದ್ಯಮಗಳು ಎಂಬುದು ಸರ್ಕಾರದ ಡೇಟಾದಲ್ಲಿರುವ ಮಾಹಿತಿ.

## ಕರ್ನಾಟಕದಲ್ಲಿ ಯಾವ ಜಿಲ್ಲೆ ಯಾವ ಉತ್ಪನ್ನ

| ಜಿಲ್ಲೆ | ಉತ್ಪನ್ನ |
|---|---|
| ಬಾಗಲಕೋಟೆ | ಈರುಳ್ಳಿ |
| ಬೆಳಗಾವಿ | ಬೆಲ್ಲ |
| ಬಳ್ಳಾರಿ | ಆಂಧ್ರೂರ |
| ಬೆಂ. ಗ್ರಾಮೀಣ | ಪೌಷ್ಟಿ ಉತ್ಪನ್ನ |
| ಬೆಂಗಳೂರು ನಗರ | ಬೇಕರಿ ಉತ್ಪನ್ನ |
| ಬೀದರ್ | ಖಂಡಿ |
| ಚಾಮರಾಜನಗರ | ಆರಣಿ |
| ಚಿಕ್ಕಬಳ್ಳಾಪುರ | ಟೊಮ್ಯಾಟೊ |
| ಚಿಕ್ಕಮಗಳೂರು | ಸಾಂಬಾರ ಪದಾರ್ಥ |
| ಚಿತ್ರದುರ್ಗ | ಕೇಂಗಾ ಉತ್ಪನ್ನ |
| ದಕ್ಷಿಣ ಕನ್ನಡ | ಸಮುದ್ರ ಉತ್ಪನ್ನ |
| ದಾವಣಗೆರೆ | ಸಿರಿಧಾನ್ಯ |
| ಧಾರವಾಡ | ಮಾವು |
| ಗದಗ | ಬ್ಯಾಡಗಿ ಮೆಣಸು |
| ಹಾಸನ | ತೆಂಗಿನ ಉತ್ಪನ್ನ |
| ಹಾವೇರಿ | ಮಾವು |
| ಕಲಬುರಗಿ | ತೊಗರಿ |
| ಕೊಡಗು | ಕಾಫಿ |
| ಕೋಲಾರ | ಟೊಮ್ಯಾಟೊ |
| ಕೊಪ್ಪಳ | ಸಿಂಬೆಹಣ್ಣು (ಪೇರಲ) |
| ಮಂಡ್ಯ | ಬೆಲ್ಲ |
| ಮೈಸೂರು | ಬಾಳೆಹಣ್ಣು |
| ರಾಯಚೂರು | ಮೆಣಸು |
| ರಾಮನಗರ | ತೆಂಗಿನ ಉತ್ಪನ್ನ |
| ಶಿವಮೊಗ್ಗ | ಅನಾನಸು |
| ತುಮಕೂರು | ತೆಂಗಿನ ಉತ್ಪನ್ನ |
| ಉಡುಪಿ | ಸಮುದ್ರ ಉತ್ಪನ್ನ |
| ಉತ್ತರ ಕನ್ನಡ | ಸಾಂಬಾರ ಪದಾರ್ಥ |
| ವಿಜಯಪುರ | ಲಿಂಬೆ |
| ಯಾದಗಿರಿ | ಕೇಂಗಾ ಉತ್ಪನ್ನ |

## ಸ್ವಾವಲಂಬಿ ಕರ್ನಾಟಕದ ಮೊದಲ ಹೆಜ್ಜೆ...

ಕರ್ನಾಟಕದಲ್ಲಿ ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆ ಪ್ರಕಾರ 20 ಜಿಲ್ಲೆಗಳಲ್ಲಿ ತೋಟಗಾರಿಕೆ ಉತ್ಪನ್